ಇಂದು ದಿನಾಂಕಃ 04.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ವಿ ವಿ ಎಂ ವಕೀಲರಿಂದಃ

ದಾವೇದ ಆಸ್ತಿ ಸರ್ವೆನಂ. 351, 352, 353, 354, 359, 307, 308, 310, 309, 314, 315, 316, 317 ಗಳು ಮೊದಲು ಒಡ್ಡಿನಕಟ್ಟಿ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತಿದ್ದಂತಹ ಆಸ್ತಿಗಳು ಎಂದರೆ ಸರಿ. ಸದರಿ ಒಡ್ಡಿನಕಟ್ಟಿ ಗ್ರಾಮದಲ್ಲಿ ಇದ್ದಂತಹ ಜನರು ಗ್ರಾಮವನ್ನು ತೊರೆದಿರುತ್ತಾರೆ ಹಾಗೂ ಸದರಿ ಗ್ರಾಮ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ. ಆ ರೀತಿ ಆ ಊರು ತನ್ನ ಅಸ್ತಿತ್ವನನ್ನು ಕಳೆದುಕೊಂಡ ನಂತರ ಮೇಲೆ ಹೇಳಿದ ಆಸ್ತಿಗಳು ಹಿರೇಕೆರೂರನ ಆಸ್ತಿಯಲ್ಲಿ ಸೇರಿಸಲಾಗಿದೆ ಎಂದರೆ ಸರಿ. ಆ ರೀತಿ ಸೇರಿಸಿ ಸುಮಾರು 70-80 ವರ್ಷಗಳಾಗಿವೆ ಎಂದರೆ ಸರಿ. ಒಡ್ಡಿನಕಟ್ಟಿ ಗ್ರಾಮದಿಂದ ಪಶ್ಚಿಮದ ದಿಕ್ಕಿನಲ್ಲಿ ಸುಮಾರು 400 ಅಡಿ ದೂರದಲ್ಲಿ ಮಾಸೂರು-ಹಿರೇಕೆರೂರಿನ ರಸ್ತೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಗೆ ಹೊಂದಿ ಪೂರ್ವ ದಿಕ್ಕಿಗೆ ಸರ್ವೆನಂ.314 ಮತ್ತು 315 ಆಸ್ತಿಗಳು ಬರುತ್ತವೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ನಕಾಶೆಯನ್ನು ನೋಡಿ ಅದರಲ್ಲಿ ಸದರಿ ರಸ್ತೆಯ ಪೂರ್ವ ದಿಕ್ಕಿಗೆ 314 ಮತ್ತು 315 ಆಸ್ತಿ ಬರುತ್ತದೆ ಎಂದರೆ ಸಾಕ್ಷಿಯ ಒಪ್ಪಿಕೊಂಡಿರುತ್ತಾರೆ. 314 ರ ಪೂರ್ವಕ್ಕೆ ಕೆರೆ ಬರುತ್ತದೆ ಎಂದರೆ ಸರಿ. ಆ ಕೆರೆಗೆ ಹೊಂದಿ ಪೂರ್ವಕ್ಕೆ 308, 308 ಕ್ಕೆ ಹೊಂದಿ ಪೂರ್ವಕ್ಕೆ 307 ಬರುತ್ತದೆ ಎಂದರೆ ಸರಿ. 307 ಕ್ಕೆ ಹೊಂದಿ ಒಡ್ಡಿನಕಟ್ಟೆ ಊರಿನ ಗಾವ ಠಾಣಾ ಬರುತ್ತದೆ ಎಂದರೆ ಸರಿ. ಸದರಿ ಊರಿಗೆ ಹೊಂದಿ ಸರ್ವೆನಂ. 360 ಆಸ್ತಿ ಬರುತ್ತದೆ ಎಂದರೆ ಸರಿ. ಅದರ ಪೂರ್ವಕ್ಕೆ ಹೊಂದಿ 351 ಬರುತ್ತದೆ ಎಂದರೆ ಸರಿ .ಅದರ ಪೂರ್ವಕ್ಕೆ ಸರ್ವೆನಂ.353 ಬರುತ್ತದೆ ಎಂದರೆ ಸರಿ. 353 ರ ಪೂರ್ವಕ್ಕೆ ಸರ್ವೆನಂ.354 ಬರುತ್ತದೆ ಎಂದರೆ ಸರಿ. ಅಲ್ಲಿಂದ ಪೂರ್ವಕ್ಕೆ ಹೊಸಳ್ಳಿ ಗ್ರಾಮ ಗಡಿ ಎಂದರೆ ಸರಿ.

2. ನಮ್ಮ ಆಸ್ತಿಯ ಸಂಖ್ಯೆ 351/2 ಆಗಿರುತ್ತದೆ. ನನ್ನ ಅಣ್ಣನ ಆಸ್ತಿ ಸಂಖ್ಯೆ 351/1 ಆಗಿರುತ್ತದೆ, ಹಾಗೂ ಆತನ ಹೆಸರು ಪ್ರಕಾಶ ಎಂದರೆ ಸರಿ. ನಮ್ಮ ಆಸ್ತಿಯು 7 ಎಕರೆ 32 ಗುಂಟೆ ಇರತ್ತದೆ. ನನ್ನ ಅಣ್ಣನ ಆಸ್ತಿಯ ವಿಸ್ತೀರ್ಣ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನಮ್ಮ ಆಸ್ತಿಯ ಪೂರ್ವಕ್ಕೆ ನನ್ನ ಅಣ್ಣನ ಆಸ್ತಿಯಾದ 351/1 ಇರುತ್ತದೆ. ದಾವಾ ಅಸ್ತಿಯ ದಕ್ಷಿಣಕ್ಕೆ 352 ಬರುತ್ತದೆ ಎಂದರೆ ಸರಿ. ಆಸ್ತಿ ಸಂಖ್ಯೆ 352 ರಲ್ಲಿ ಒಟ್ಟು 4 ಭಾಗಗಳಾಗಿರತ್ತವೆ ಎಂದರೆ ಸರಿ. 352 ರ ಪಶ್ಚಿಮಕ್ಕೆ ಬಾಬಣ್ಣ ಅನಗೊಂಡರ್ ಇರುತ್ತಾರೆ ಎಂದರೆ ಸರಿ. ಅದಕ್ಕೆಹೊಂದಿಕೊಂಡು ಪೂರ್ವ ಭಾಗಕ್ಕ 1 ಮತ್ತು 2 ನೇ ಪ್ರತಿವಾದಿಯವ ರ ಜಾಗ ಇರುತ್ತದೆ ಎಂದರೆ ಸರಿ. ಅವರ ಪೂರ್ವಕ್ಕೆ ಬಾಲಪ್ಪ ಹುಳಿಕಟ್ಟೆ ರವರ ಆಸ್ತಿ ಇರುತ್ತದೆ ಎಂದರೆ ಸರಿ. ಅವರ ಆಸ್ತಿಯ ಪೂರ್ವಕ್ಕೆ ಬೀಮಪ್ಪ ಹುಲಿಕಟ್ಟೆ ರವರ ಆಸ್ತಿ ಇರುತ್ತದೆ ಎಂದರೆ ಸರಿ. ನನ್ನ ಆಸ್ತಿಯ ದಕ್ಷಿಣಕ್ಕೆ ಬಾಬಣ್ಣ ಅನಗೊಂಡರ್ ಇರುತ್ತಾರೆ ಎಂದರೆ

ಸರಿ. ನನ್ನ ಅಣ್ಣನ ಆಸ್ತಿಯ ದಕ್ಷಿಣಕ್ಕೆ 1 ಮತ್ತು 2 ನೇ ಪ್ರತಿವಾದಿಯರ ಆಸ್ತಿ ಬರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಮಗ ಎಂದರೆ ಸರಿ.

3. 1ನೇ ಪ್ರತಿವಾದಿಯು ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರೆ ಸರಿ. 2ನೇ ಪ್ರತಿವಾದಿಯು ಡಿ ವೈ ಎಸ್ ಪಿ ಆಗಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಗೆ ನೌಕರಿ ಸಿಕ್ಕನಂತರ ಅವರು ಹಿರೇಕೆರೂರನಲ್ಲಿ ಖಾಯಂ ಆಗಿ ವಾಸವಾಗಿರುವುದಿಲ್ಲ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯ ಆಗಾಗ ಬಂದು ಹೋಗಿ ಮಾಡುತ್ತಾರೆ ಎಂದು ನುಡಿದಿರುತ್ತಾರೆ. ನಾನು 2ನೇ ಪ್ರತಿವಾದಿಯನ್ನು ಸುಮಾರು 2 ತಿಂಗಳ ಹಿಂದೆ ದುರ್ಗಾದೇವಿ ಉದ್ಯಾನವನದಿಂದ ಹೊರಗೆ ಬಂದಿರುತ್ತಾರೆ. ನನ್ನ ಮತ್ತು 2 ನೇ ಪ್ರತಿವಾದಿಯ ಮನೆ ಅಕ್ಕಪಕ್ಕದ ಮನೆಗಳು ಎಂದರೆ ಸರಿ. ಈ ದಾವೆ ಮಾಡುವ ಪೂರ್ವದಲ್ಲಿ ನಾನು 1ನೇ ಪ್ರತಿವಾದಿಯನ್ನು ನೋಡಿರುವುದಿಲ್ಲ, 2 ನೇ ಪ್ರತಿವಾದಿಯನ್ನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಎಷ್ಟು ದಿನದ ಮೊದಲು ಅವನ್ನು ನೋಡಿರುತ್ತೇನೆಂದು ನನಗೆ ಹೇಳಲು ಆಗುವುದಿಲ್ಲ. ನಾನು ಅವರನ್ನು ಬೇಟಿಯಾಗಿರುತ್ತೇನೆ. ನಾನು ಅವರನ್ನು ನಮ್ಮ ಮನೆಯ ಬಳಿ ದಾವೆ ಮಾಡುವ ಪೂರ್ವದಲ್ಲಿ  ನೋಡಿರುತ್ತೇನೆ. ಅಲ್ಲಿ ಹೊರತುಪಡಿಸಿ ಬೇರೆ ಎಲ್ಲಿ ನಾನು ಅವರನ್ನು ನೋಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ.

4. ನಮ್ಮ ಮನೆಗಳಿಂದ ದಾವಾ ಆಸ್ತಿಗಳಿಗೆ ಸುಮಾರು 1ವರೆ ಕಿ ಮೀ ಅಂತರ ಇರುತ್ತದೆ. ನಮ್ಮ ಮನೆಗಳ ಬಳಿ ನಮ್ಮ ಮತ್ತು ಪ್ರತಿವಾದಿಯರ ನಡುವೆ ಯಾವತ್ತೂ ಮಾತುಕತೆ ನಡೆದಿರುವುದಿಲ್ಲ. ಸರ್ವೆನಂ. 314, 315, 308, 307 ರ ದಕ್ಷಿಣ ಭಾಗಕ್ಕೆ ಒಂದು ಕಚ್ಚಾ ರಸ್ತೆಯನ್ನು ಹಾಕಲಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯು ಗಾವ ಠಾಣಾ ಮುಗಿಯುವರೆಗೂ ಇರುತ್ತದೆ ಎಂದರೆ ಸರಿ. ಸರ್ವೆನಂ.360, 351, 353, 354 ರಲ್ಲಿ ಸದರಿ ರಸ್ತೆಯು ಮುಂದುವರೆದಿರುತ್ತದೆ ಎಂದರೆ ಸಾಕ್ಷಿಯು ಸದರಿ ರಸ್ತೆಯು ಇರುವುದಿಲ್ಲ ಆದರೆ ಕಾಲು ದಾರಿ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಮತ್ತು ಸರ್ವೆನಂ.352, ಮತ್ತು 353 ರ ಮಾಲೀಕರ ಒಪ್ಪಿಗೆಯನ್ನು ಪಡೆದುಕೊಂಡು ಸದರಿ ಆಸ್ತಿಗಳ ದಕ್ಷಿಣ ದಿಕ್ಕಿಗೆ ಸುಮಾರು 16 ಅಡಿ ಅಗಲದಲ್ಲಿ ಓಡಾಡಲು ರಸ್ತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.